# ಫುಸ್ಕೋಸ್ ಶಾಲೆ[ಐಸಿಎಸ್ಇ]

ಇಂದಿರನಗರ ಬೆಂಗಳೂರು

ವಾರ್ಷಿಕ ಪರೀಕ್ಷೆ 2016 - 2017

ವಿಷಯ : ತೃತೀಯ ಭಾಷೆ ಕನ್ನಡ

ತರಗತಿ : 6 ಅಂಕಗಳು : 80

---

**I.ಒಂದೇ ರೀತಿಯ ಅರ್ಥಬರುವ ಪದಗಳನ್ನು ಆವರಣದಿಂದ ಆರಿಸಿ ಬರೆಯಿರಿ :–6**

(ಚಿಂತನೆ, ನಿಜ, ವಿಚಾರ, ಅರಣ್ಯ, ದಿಟ, ಸುಳ್ಳು, ಕಾನನ, ಹುಸಿ, ನೆಂಟಸ್ತಿಕೆ, ತುದಿ, ಬಂಧುತ್ವ, ಕೊನೆ)

೧. ಮನನ

೨. ಕಾಡು

೩. ಸತ್ಯ

೪. ಮಿಥ್ಯ

೫. ಅಂಥ್ಯ

೬. ಬಾಂಧವ್ಯ

**II.ಈ ಪದಗಳನ್ನು ಬಿಡಿಸಿ ಬರೆಯಿರಿ :– 3**

ಮಾದರಿ : ಬರುತ್ತಿರಲಿಲ್ಲ = ಬರುತ್ತಾ + ಇರಲಿಲ್ಲ.

೧. ಕಲಿಯುತ್ತಿರಲಿಲ್ಲ

೨. ಅಳುತ್ತಿರಲಿಲ್ಲ

೩. ನಗುತ್ತಿರಲಿಲ್ಲ

೪. ಮಾಡುತ್ತಿರಲಿಲ್ಲ

೫. ನೋಡುತ್ತಿರಲಿಲ್ಲ

೬. ಕಳೆಯುತ್ತಿರಲಿಲ್ಲ

**III. ಕೂಡಿಸಿ ಬರೆಯಿರಿ :– 3**

೧. ಮಾದರಿ : ಹಸಿವು + ಆಯಿತು = ಹಸಿವಾಯಿತು

೨. ಆಸೆಯು + ಆಯಿತು =

೩. ಭಯವು + ಆಯಿತು =

೪. ಚಿಂತೆಯು + ಆಯಿತು =

೫. ದುಃಖವು + ಆಯಿತು =

೬. ಸಂತೋಷವು + ಆಯಿತು =

೭. ನೋವು + ಆಯಿತು =

**IV.ಮಾದರಿಯಂತೆ ಬದಲಾಯಿಸಿ ಬರೆಯಿರಿ :-** **3**

ಮಾದರಿ : ರಚಿಸು – ರಚಿಸಿದರು

೧.ಕರೆಸು ೨.ಪ್ರೋತ್ಸಾಹಿಸು ೩.ಬೆಳೆಸು

೪.ನಡೆಸು ೫.ಚಿಂತಿಸು ೬.ತಿನ್ನಿಸು

**V.ಈ ವಾಕ್ಯಗಳ ವಚನ ಬದಲಾಯಿಸಿ ಬರೆಯಿರಿ :-** **5**

೧. ಹುಡುಗನು ಮೈಧಾನದಲ್ಲಿ ಆಡುತ್ತಾನೆ.

೨. ಹುಡುಗಿಯು ಚಿತ್ರವನ್ನು ಬಿಡಿಸುತ್ತಾಳೆ.

೩. ನಾನು ನಾಳೆ ಶಾಲೆಗೆ ಹೋಗಬೇಕು.

೪. ನೀವು ನಮ್ಮ ಜೊತೆ ಬರಬೇಕು.

೫. ನಾನು ಮಾರುಕಟ್ಟೆಗೆ ಹೋಗುವೆನು.

**VI.ವಿರುದ್ಧ ಪದ ಬರೆಯಿರಿ :-** **5**

೧.ನಾಶ ೨.ಕಷ್ಟ ೩.ಮಿಥ್ಯ ೪.ಅಂತ್ಯ ೫.ಸಹಕಾರಿ

೬.ದೊಡ್ಡದು ೭.ಹೊರಗೆ ೮. ತಪ್ಪು ೯.ಪ್ರೀತಿ ೧೦.ಸುಲಭ

**VII.ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬರೆಯಿರಿ :-** **5**

೧. ಭಗ್ನವಾದ

೨. ಯುದ್ಧಮಾಡಿ

೩. ಪ್ರತ್ಯೇಕವಾಗಿ

೪. ಮುಖ್ಯವಾದ

೫. ನಿರ್ಮಾಣ

**VIII.ಲಿಂಗ ಬದಲಾಯಿಸಿ ಬರೆಯಿರಿ :-** **3**

೧.ತಂದೆ ೨.ಬಾಲಕ ೩.ಸಾಧು

೪.ತಾಯಿ ೫.ಮಾತೆ ೬.ಅಕ್ಕ

**XI.ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ ಮತ್ತು ಕವಿಯ ಹೆಸರುಬರೆಯಿರಿ :-** **5**

ಮರಗಿಡಗಳ _____________

_____________________

_____________________

____________ ದಹನ !

## X.ಈ ಕೆಳಗಿನ ಗದ್ಯಭಾಗವನ್ನು ಓದಿರಿ ಮತ್ತು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ :8

ವರ್ತಮಾನ ಪತ್ರಿಕೆಗಳು, ಸಮಾಚಾರ ಪತ್ರಗಳು, ನಮ್ಮಸುತ್ತಮುತ್ತ ನಡೆಯುವ ಆಗುಹೋಗುಗಳನ್ನು ತಿಳಿಸುವ ಸಾಧನಗಳಾಗಿವೆ.
ವರ್ತಮಾನ ಪತ್ರಿಕೆಗಳಲ್ಲಿ ಮಾಶ ಪತ್ರಿಕೆ, ವಾರಪತ್ರಿಕೆ, ಹೀಗೆ ಅನೇಕ ವಿಧಗಳಿವೆ. ರಾಷ್ಟ್ರದ ಹಾಗೂ ಪ್ರಪಂಚದ ರಾಜಕೀಯ ಪ್ರಚಲಿತ ಘಟನೆಗಳು, ಕ್ರೀಡಾ ವಿವರಗಳು, ಚಿತ್ರಸುದ್ಧಿ, ಉದ್ಯೋಗ ಮಾಹಿತಿ, ಎಲ್ಲರಿಗೂ ಮಾಹಿತಿ ನೀಡುವಂತಹ ಲೇಖನಗಳು ಇದರಲ್ಲಿ ಅಡಕವಾಗಿರುತ್ತವೆ. ವಿದ್ಯಾರ್ಥಿಗಳಿಗೆ ಅನೇಕ ವಿಷಯಗಳ ಬಗ್ಗೆ ಮಾಹಿತಿ ನೀಡುವಲ್ಲಿಪತ್ರಿಕೆಗಳು ಮಹತ್ತರವಾದ ಪಾತ್ರವನ್ನು ಒದಗಿಸುತ್ತವೆ, ಭಾಷೆಯನ್ನು ಉತ್ತಮಗೊಳಿಸಿಕೊಳ್ಳಲು ಸಹಕಾರಿಯಾಗಿವೆ. ಪ್ರಪಂಚದಲ್ಲಿ ಎಷ್ಟೋ ಜನರಿಗೆ ಪತ್ರಿಕೆಗಳನ್ನು ಓದದಿದ್ದರೆ ಆ ದಿನವೇ ಆರಂಭವಾದಂತೆ ಅನಿಸುವುದಿಲ್ಲ. ವರ್ತಮಾನ ಪತ್ರಿಕೆಗಳು ಜನಜೀವನದ ಬದುಕಿನಲ್ಲಿ ಹಾಸುವಕ್ಕಾಗಿದೆ. ಜನರಿಗೆ ನಾಗರೀಕ ಹಾಗೂ ಸಾಮಾಜಿಕ ಪ್ರಜ್ಞೆಯನ್ನು ಉಂಟುಮಾಡುವುದರಲ್ಲಿಯೂ ಸಹ ಇದರ ಪಾತ್ರ ಬಹಳ ದೊಡ್ಡದು.

**ಪ್ರಶ್ನೆಗಳು :-**

೧. ವರ್ತಮಾನ ಪತ್ರಿಕೆಗಳು ನಮಗೆ ಯಾವ ರೀತಿಯ ಸಾಧನಗಳಾಗಿವೆ ?
೨. ಪತ್ರಿಕೆಗಳಲ್ಲಿರುವ ವಿಧಗಳಾವುವು ?
೩. ಪತ್ರಿಕೆಗಳಲ್ಲಿ ಯಾವ ರೀತಿಯ ವಿಷಯವು ಅಡಕವಾಗಿರುತ್ತವೆ ?
೪. ಪತ್ರಿಕೆಗಳು ಜನರಲ್ಲಿ ಯಾವ ರೀತಿಯ ಪ್ರಜ್ಞೆಯನ್ನು ಉಂಟು ಮಾಡುತ್ತವೆ ?

## XI.ಈ ಕಳಗಿನ ಮಾತನ್ನು ಯಾರು ಯಾರಿಗೆ ? ಹೇಳಿದರು . 4

೧. ಸ್ವಾಮಿ ನಾನೊಬ್ಬ ತಂದೆಯಿಲ್ಲದ ಬಾಲಕ.
೨. ಭಕ್ತಿಯಿಂದ ನೀನು ಆ ಗುಡಿಗೆ ಹೋಗಿ ಕಾಳಿಮಾತೆಯನ್ನು ಸ್ಮರಣೆಮಾಡು .

## XII.ಯಾವುದಾದರೂ ಎರಡು ವಿಷಯಗಳ ಬಗ್ಗೆ ಟಿಪ್ಪಣಿ ಬರೆಯಿರಿ :- 8

೧. ವಿರೂಪಾಕ್ಷ ದೇವಾಲಯ.
೨. ವಿಜಯ ವಿಠಲ ದೇವಾಲಯ.
೩. ಉಳಿದಿರುವಂತಹ ಪ್ರಮುಖ ಸ್ಮಾರಕಗಳು.

## XIII.ಬಿಟ್ಟಸ್ಥಳ ತುಂಬಿರಿ :- 6

೧. ಹಂಪೆಯನ್ನು ಎಂಟನೆಯ ಶತಮಾನದ ಶಾಸನದಲ್ಲಿ __________ ಎಂದು ಕರೆದಿದ್ದಾರೆ.
೨. ಕುವೆಂಪುರವರು ಜನಿಸಿದ್ದು ತೀರ್ಥಹಳ್ಳಿ ತಾಲ್ಲೂಕಿನ ________ಯಲ್ಲಿ.
೩. ಕುವೆಂಪು ರವರ ಪೂರ್ಣ ಹೆಸರು ____________
೪. ಶ್ರೀರಾಮಾಯಣ ದರ್ಶನಂ ಮಹಾಕಾವ್ಯಕ್ಕೆ ದೊರೆತ ಅತ್ಯುನ್ನತ ಪ್ರಶಸ್ತಿ ___
೫. ಕುವೆಂಪುರವರ ಜನ್ಮ ಶತಮಾನೋತ್ಸವವನ್ನು ಆಚರಿಸಿದ ವರ್ಷ _____
೬. ಪ್ರಕೃತಿ ಪದ್ಯವನ್ನು ಬರೆದವರು _________

**XIV. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ :-** **6**

೧. ಅದ್ಭುತವಾದ ನಾಡಗೀತೆಯನ್ನು ರಚಿಸಿದವರು ಯಾರು ?
೨. ರಾಮಕೃಷ್ಣನು ಎಲ್ಲಿ ವಾಸವಾಗಿದ್ದನು ?
೩. ಬಾಲಕ ರಾಮಕೃಷ್ಣನು ಅಳುವ ಶಬ್ದ ಯಾರಿಗೆ ಕೇಳಿಸಿತು ?
೪. ಯಾವುದು ಸಂಕಷ್ಟಕ್ಕೆ ಸಿಲುಕಿದೆ ?
೫. ಹಂಪೆಯು ಯಾವ ಜಿಲ್ಲೆಯಲ್ಲಿದೆ ?
೬. ಸಾಧುವಿನ ಮಾತಿನಂತೆ ರಾಮಕೃಷ್ಣನು ಎಲ್ಲಿಗೆ ಹೋದನು ?

**XV. ಈ ಕೆಳಗಿನ ಯಾವುದಾದರೂ ಮೂರು (any three ) ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿರಿ :-** **6**

೧. ಬಾಲಕನಿಗೆ ಸಾಧುವು ಏನೆಂದು ಹೇಳಿದನು ?
೨. ಕಾಳಿಮಾತೆಯು ಏನೆಂದು ಹರಸಿ ಮಾಯವಾದಳು ?
೩. ಕುವೆಂಪುರವರ ಕೆಲವು ಕೃತಿಗಳನ್ನು ಹೆಸರಿಸಿರಿ :-
೪. ಕುವೆಂಪುರವರಿಗೆ ದೊರೆತ ಪ್ರಶಸ್ತಿಗಳನ್ನು ಬರೆಯಿರಿ :-

**XVI. ನಿಮ್ಮ ಆರೋಗ್ಯವು ಸರಿಯಿಲ್ಲ ಎಂದು ಹೇಳಿ ತರಗತಿಯ ಶಿಕ್ಷಕರಿಗೆ ಒಂದು ರಜಪತ್ರವನ್ನು ಬರೆಯಿರಿ :-** **4**

ಅಥವಾ OR

**ನೀವು ನೋಡಿದ ಯಾವುದಾದರೂ ಪ್ರೇಕ್ಷಣೀಯ ಸ್ಥಳದ ಬಗ್ಗೆ ಎಂಟು ಅಥವಾ ಹತ್ತು ವಾಕ್ಯಗಳನ್ನು ಬರೆಯಿರಿ :-**